# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :** **1342(1518)**

ಸದಸ್ಯರ ಹೆಸರು : ಡಾ|| ಎಂ.ಜಿ. ಮುಳೆ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 17.03.2026

ಉತ್ತರಿಸುವವರು : ಪೌರಾಡಳಿತ ಮತ್ತು ಹಜ್ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| **ಅ)** | ಬೀದರ್ ಜಿಲ್ಲೆಯ ನಗರಸಭೆ ಮತ್ತು ಪುರಸಭೆಗಳ ವ್ಯಾಪ್ತಿಯಲ್ಲಿ ಸೊಳ್ಳೆಗಳ ನಿಯಂತ್ರಣಕ್ಕಾಗಿ ನಿಯಮಿತವಾಗಿ ಫಾಗಿಂಗ್ ಹಾಗೂ ಕೀಟನಾಶಕ ಸಿಂಪಡಣೆ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆಯೇ; ಕಳೆದ ಆರು ತಿಂಗಳ ಅವಧಿಯಲ್ಲಿ ವಾರ್ಡ್‌ವಾರು ಎಷ್ಟು ಬಾರಿ ಫಾಗಿಂಗ್/ ಸಿಂಪಡಣೆ ನಡೆಸಲಾಗಿದೆ; ಈ ಕಾರ್ಯಗಳಿಗೆ ಮೀಸಲಾದ ಅನುದಾನ ಮತ್ತು ವೆಚ್ಚದ ವಿವರವೇನು; | ಬೀದರ್ ಜಿಲ್ಲೆಯ ನಗರಸಭೆ ಮತ್ತು ಪುರಸಭೆಗಳ ವ್ಯಾಪ್ತಿಯಲ್ಲಿ ಸೊಳ್ಳೆಗಳ ನಿಯಂತ್ರಣಕ್ಕಾಗಿ ನಿಯಮಿತವಾಗಿ ಫಾಗಿಂಗ್ ಹಾಗೂ ಕೀಟನಾಶಕ ಸಿಂಪಡಣೆ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿರುವ ಕುರಿತು ಮತ್ತು ಕಳೆದ ಆರು ತಿಂಗಳ ಅವಧಿಯಲ್ಲಿ ವಾರ್ಡ್‌ವಾರು ಫಾಗಿಂಗ್/ ಸಿಂಪಡಣೆ ಕಾರ್ಯ ಹಾಗೂ ಸದರಿ ಕಾರ್ಯಕ್ಕೆ ನಗರ ಸ್ಥಳೀಯ ಸಂಸ್ಥೆಗಳು ಮೀಸಲಿರಿಸಿದ ಅನುದಾನ ಮತ್ತು ವೆಚ್ಚದ ವಿವರವನ್ನು **ಅನುಬಂಧ -01** ರಲ್ಲಿ ನೀಡಲಾಗಿದೆ. |
| **ಆ)** | ಜಿಲ್ಲೆಯ ನಗರ ಪ್ರದೇಶಗಳಿಂದ ಸಂಗ್ರಹವಾಗುವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಸ್ಥಾಪಿಸಲಾದ ಘನ ತ್ಯಾಜ್ಯ ನಿರ್ವಹಣಾ ಘಟಕಗಳ (Solid Waste Management Units) ಒಟ್ಟು ಸಂಖ್ಯೆ ಎಷ್ಟು; ಅವುಗಳಲ್ಲಿ ಸಂಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಘಟಕಗಳ ಸಂಖ್ಯೆ ಎಷ್ಟು; ಪ್ರತ್ಯೇಕವಾಗಿ ಒಣ/ತೇವದ ತ್ಯಾಜ್ಯ ವಿಂಗಡನೆ ವ್ಯವಸ್ಥೆ ಜಾರಿಯಲ್ಲಿದೆಯೇ; | ಬೀದರ್ ಜಿಲ್ಲೆಯ ನಗರಸಭೆ ಮತ್ತು ಪುರಸಭೆಗಳ ವ್ಯಾಪ್ತಿಯಲ್ಲಿ ಸಂಗ್ರಹವಾಗುವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಸ್ಥಾಪಿಸಲಾದ ಘನ ತ್ಯಾಜ್ಯ ನಿರ್ವಹಣಾ ಘಟಕಗಳ (Solid Waste Management Units) ಸಂಖ್ಯೆ ಮತ್ತು ಸದರಿ ಘಟಕಗಳ ಕಾರ್ಯನಿರ್ವಹಿಸುತ್ತಿರುವ ಪ್ರಮಾಣ (capacity & gap) ಹಾಗೂ ಒಣ ತ್ಯಾಜ್ಯ & ಹಸಿ ತ್ಯಾಜ್ಯ ವಿಂಗಡನೆ ಮಾಡಲು ಕೈಗೊಂಡ ಕ್ರಮಗಳ ಕುರಿತು ವಿವರವನ್ನು **ಅನುಬಂಧ -02** ರಲ್ಲಿ ನೀಡಲಾಗಿದೆ. |

| | | |
|---|---|---|
| ಇ) | ನಗರ ಪ್ರದೇಶಗಳ ಸಾರ್ವಜನಿಕ ಶೌಚಾಲಯಗಳ ನಿರ್ವಹಣೆ ಸಮರ್ಪಕವಾಗಿಲ್ಲ ಎಂಬ ದೂರುಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಇವುಗಳ ನಿರ್ವಹಣೆಗೆ ವಾರ್ಷಿಕವಾಗಿ ಮೀಸಲಾದ ಅನುದಾನ ಎಷ್ಟು ನಿರ್ವಹಣೆಯನ್ನು ಖಾಸಗಿ ಸಂಸ್ಥೆಗಳಿಗೆ ವಹಿಸಲಾಗಿದೆಯೇ; | ಬೀದರ್ ಜಿಲ್ಲೆಯ ನಗರಸಭೆ ಮತ್ತು ಪುರಸಭೆಗಳ ವ್ಯಾಪ್ತಿಯಲ್ಲಿ ಸಾರ್ವಜನಿಕ ಶೌಚಾಲಯಗಳ ನಿರ್ವಹಣೆ ಮೀಸಲಾದ ಅನುದಾನ ಕುರಿತ ಮಾಹಿತಿ ಹಾಗೂ ಸದರಿ ಶೌಚಾಲಯಗಳನ್ನು ಖಾಸಗಿ ಸಂಸ್ಥೆಗಳ ಮೂಲಕ ನಿರ್ವಹಣೆ ಮಾಡಲಾಗುತ್ತಿರುವ ಬಗ್ಗೆ ವಿವರವನ್ನು **ಅನುಬಂಧ -03** ರಲ್ಲಿ ನೀಡಲಾಗಿದೆ. |
| ಈ) | ಬೀದರ್ ಜಿಲ್ಲೆಯ ನಗರ ಪ್ರದೇಶಗಳಲ್ಲಿ ಡೆಂಗ್ಯೂ, ಮಲೇರಿಯಾ ಮತ್ತು ಚಿಕನ್ ಗುನಿಯಾ ಮುಂತಾದ ಸಾಂಕ್ರಾಮಿಕ ರೋಗಗಳುಹರಡದಂತೆ ಮುನ್ನೆಚ್ಚರಿಕಾ ಕ್ರಮವಾಗಿ ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಕೈಗೊಂಡಿರುವ ಕ್ರಮಗಳೇನು; ಕಳೆದ ಒಂದು ವರ್ಷದಲ್ಲಿ ದಾಖಲಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು; | ಬೀದರ್ ಜಿಲ್ಲೆಯ ನಗರ ಪ್ರದೇಶಗಳಲ್ಲಿ ಡೆಂಗ್ಯೂ, ಮಲೇರಿಯಾ ಮತ್ತು ಚಿಕೂನ್‌ಗುನ್ಯಾ ಮುಂತಾದ ಸಾಂಕ್ರಾಮಿಕ ರೋಗಗಳು ಹರಡದಂತೆ ಮುನ್ನೆಚ್ಚರಿಕಾ ಕ್ರಮವಾಗಿ ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ನಗರಸಭೆ ಮತ್ತು ಪುರಸಭೆಗಳ ವ್ಯಾಪ್ತಿಯಲ್ಲಿ ಲಾರ್ವಾ ಸರ್ವೆ ಕಾರ್ಯ ಕೈಗೊಳ್ಳಲಾಗಿರುತ್ತದೆ ಹಾಗೂ ಕಳೆದ ಒಂದು ವರ್ಷದಲ್ಲಿ ಒಟ್ಟು 33 ಸಂಖ್ಯೆ ಡೆಂಗ್ಯೂ, ಮಲೇರಿಯಾ ಮತ್ತು ಚಿಕೂನ್‌ಗುನ್ಯಾ ಪ್ರಕರಣಗಳು ದಾಖಲಾಗಿರುವ ವರದಿಯಾಗಿರುತ್ತವೆ. |
| ಉ) | ನಗರ ಪ್ರದೇಶಗಳಲ್ಲಿ ಸಾಂಕ್ರಾಮಿಕ ರೋಗಗಳ ಹರಡುವಿಕೆಯನ್ನು ಮೇಲ್ವಿಚಾರಣೆ ಮಾಡಲು 'Urban Health Monitoring System' ಜಾರಿಯಲ್ಲಿದೆಯೇ; ಕುಡಿಯುವ ನೀರಿನ ಕಲುಷಿತತೆ, ಒಳಚರಂಡಿ ತೊಂದರೆ ಮತ್ತು ನೈರ್ಮಲ್ಯ ಸಮಸ್ಯೆಗಳ ಕುರಿತು ಸಾರ್ವಜನಿಕರು ದೂರು ಸಲ್ಲಿಸಲು ಇರುವ ಸಹಾಯವಾಣಿ (Helpline) ಮೊಬೈಲ್ ಆಪ್ ಅಥವಾ ಆನ್‌ಲೈನ್ ಪೋರ್ಟಲ್ ವ್ಯವಸ್ಥೆಗಳ ವಿವರಗಳೇನು? | ನಗರ ಪ್ರದೇಶಗಳಲ್ಲಿ ಸಾಂಕ್ರಾಮಿಕ ರೋಗಗಳ ಹರಡುವಿಕೆಯನ್ನು ಮೇಲ್ವಿಚಾರಣೆ ಮಾಡಲು 'Urban Health Monitoring System' ಜಾರಿಯಲ್ಲಿದ್ದು, ಸದರಿ ಮೇಲ್ವಿಚಾರಣೆಯನ್ನು ಡಿ.ಹೆಚ್.ಓ ರವರ ಕಚೇರಿಯಿಂದ ನಿರ್ವಣೆ ಮಾಡಲಾಗುತ್ತಿದೆ.<br><br>ಮುಂದುವರೆದು, ಕುಡಿಯುವ ನೀರಿನ ಕಲುಷಿತತೆ, ಒಳಚರಂಡಿ ತೊಂದರೆ ಮತ್ತು ನೈರ್ಮಲ್ಯ ಸಮಸ್ಯೆಗಳ ಕುರಿತು ಸಾರ್ವಜನಿಕರು ದೂರು ಸಲ್ಲಿಸಲು iPGRS ರಡಿ Janaspandana ದ ಮೂಲಕ ದೂರಗಳನ್ನು ಸ್ವೀಕರಿಸಲಾಗುತ್ತಿರುತ್ತದೆ. |

ಇ-ಸಂಖ್ಯೆ: ನಅಇ 118 ಜಿಇಎಲ್ 2026 (ಇ)

(ರಹೀಂ ಖಾನ್)
ಪೌರಾಡಳಿತ ಮತ್ತು ಹಜ್ ಸಚಿವರು.

# ಅನುಬಂಧ-1

| ಕ್ರ | ನಗರ ಸ್ಥಳೀಯ ಸಂಸ್ಥೆ ಹೆಸರು | ಶೌಚಾಲಯ ಸಂಕೀರ್ಣ ನಿರ್ಮಿಸಲಾಗಿದೆ (ಹೌದು/ಇಲ್ಲ) | ಎಷ್ಟು ಸೀಟು ಶೌಚಾಲಯ ಸಂಕೀರ್ಣ | ಘಟಕಗಳು | ಅದು ಘಟಕಗಳು | ಬಿಡುಗಡೆಯಾದ ಅನುದಾನ ಮೊತ್ತ(ಲಕ್ಷಗಳಲ್ಲಿ) | ಬೇಕಾಗುವ ಅನುದಾನ | ಷರಾ | ಸ್ನಾನಗೃಹ ನಿರ್ಮಿಸಲಾಗಿದೆ (ಹೌದು/ಇಲ್ಲ) | ಎಷ್ಟು ಸೀಟು ಸ್ನಾನಗೃಹ ನಿರ್ಮಿಸಲಾಗಿದೆ | ಘಟಕಗಳು | ಅದು ಘಟಕಗಳು | ಬಿಡುಗಡೆಯಾದ ಅನುದಾನ ಮೊತ್ತ(ಲಕ್ಷಗಳಲ್ಲಿ) | ಬೇಕಾಗುವ ಅನುದಾನ | ಷರಾ |
|---|---|---|---|---|---|---|---|---|---|---|---|---|---|---|---|
| 1 | ಮಹಾನಗರ ಪಾಲಿಕೆ ಬೀದರ | ಹೌದು | 6 | 1 | 6 | 1 | 1.25 | ನಗರಸಭೆಗಳು ಹಾಗೂ ಪುರಸಭೆಗಳು ತಮ್ಮ ಸ್ವಂತ ನಿಧಿಯಿಂದ ಅವಶ್ಯಕತೆಗೆ ಅನುಗುಣವಾಗಿ ಉಪಯೋಗಿಸಿ ಕೊಳ್ಳಲಾಗುವುದು. | ಹೌದು | 6 | 1 | 6 | 1 | 2 | ನಗರಸಭೆಗಳು ಹಾಗೂ ಪುರಸಭೆಗಳು ತಮ್ಮ ಸ್ವಂತ ನಿಧಿಯಿಂದ ಅವಶ್ಯಕತೆಗೆ ಅನುಗುಣವಾಗಿ ಉಪಯೋಗಿಸಿ ಕೊಳ್ಳಲಾಗುವುದು. |
| 2 | ಬಸವಕಲ್ಯಾಣ ನಗರಸಭೆ | ಹೌದು | 6 | 1 | 6 | 0.5 | 1.25 | | ಹೌದು | 3 | 1 | 2 | 0.7 | 2.2 | |
| 3 | ಭಾಲ್ಕಿ ಪುರಸಭೆ | ಹೌದು | 6 | 1 | 6 | 0.5 | 1 | | ಹೌದು | 6 | 1 | 5 | 0.55 | 1.5 | |
| 4 | ಹುಮನಾಬಾದ ಪುರಸಭೆ | ಹೌದು | 3 | 1 | 2 | 0.5 | 1 | | ಹೌದು | 3 | 1 | 2 | 0.5 | 1 | |
| 5 | ಚಿಟಗುಪ್ಪಾ ಪುರಸಭೆ | ಹೌದು | 10 | 2 | 8 | 0.5 | 0.27 | | ಹೌದು | 1 | 1 | 1 | 0.5 | 0.27 | |
| 6 | ಹಳ್ಳಿಖೇಡ (ಬಿ) ಪುರಸಭೆ | | 3 | 1 | 2 | 0.5 | 0.27 | | ಹೌದು | 1 | 1 | 1 | 0.5 | 0.3 | |
| 7 | ಪಟ್ಟಣ ಪಂಚಾಯತಿ ಔರಾದ (ಬಾ) | ಹೌದು | 2 | 1 | 1 | 0.25 | 0.5 | | ಹೌದು | 2 | 1 | 2 | 0.25 | 0.25 | |
| | | ಒಟ್ಟು | 36 | 8 | 31 | 3.75 | 5.54 | | 0 | 22 | 7 | 19 | 4 | 7.52 | |

ಯೋಜನಾ ನಿರ್ದೇಶಕರು
ಜಿಲ್ಲಾ ನಗರಾಭಿವೃದ್ಧಿ ಕೋಶ
ಬೀದರ

ಅನುಬಂಧ–2

| ಕ್ರ | ನಗರ ಸ್ಥಳೀಯ ಸಂಸ್ಥೆ ಹೆಸರು | ಘನ ತ್ಯಾಜ್ಯ ನಿರ್ವಹಣಾ ಘಟಕಗಳ (Solid Waste Management Units) ಒಟ್ಟು ಸಂಖ್ಯೆ ಎಷ್ಟು | ಒಣ ತ್ಯಾಜ್ಯ ವಿಂಗಡಣೆ ವ್ಯವಸ್ಥೆ ಜಾರಿಯಲ್ಲಿದೆಯೇ (ಹೌದು/ಇಲ್ಲ) | Current Dry Waste Generation | Current Dry Waste Processing | Current Dry Waste Gap | ಹಸಿ ತ್ಯಾಜ್ಯ ವಿಂಗಡಣೆ ವ್ಯವಸ್ಥೆ ಜಾರಿಯಲ್ಲಿದೆಯೇ (ಹೌದು/ಇಲ್ಲ) | Current Wet Waste Generation | Current Wet Waste Processing | Current Wet Waste Gap |
|---|---|---|---|---|---|---|---|---|---|---|
| 1 | ಮಹಾನಗರ ಪಾಲಿಕೆ ಬೀದರ | 1 | ಹೌದು | 25 | 25 | 0 | ಹೌದು | 56 | 40 | 16 |
| 2 | ಬಸವಕಲ್ಯಾಣ ನಗರಸಭೆ | : | ಹೌದು | 11 | 8 | 3 | ಹೌದು | 15.4 | 15.1 | 0.3 |
| 3 | ಭಾಲ್ಕಿ ಪುರಸಭೆ | : | ಹೌದು | 7 | 7 | 0 | ಹೌದು | 13 | 13 | 0 |
| 4 | ಹುಮನಾಬಾದ ಪುರಸಭೆ | 1 | ಹೌದು | 7 | 6 | 1 | ಹೌದು | 11.5 | 11.5 | 0 |
| 5 | ಚಿಟಗುಪ್ಪಾ ಪುರಸಭೆ | : | ಹೌದು | 4 | 3.85 | 0.15 | ಹೌದು | 6.05 | 6 | 0.05 |
| 6 | ಹಳ್ಳಿಖೇಡ (ಬಿ) ಪುರಸಭೆ | ಘನ ತ್ಯಾಜ್ಯ ಘಟಕ ನಿರ್ಮಾಣ ಹಂತದಲ್ಲಿದೆ | ಹೌದು | 2.45 | 2.45 | 0 | ಹೌದು | 3.85 | 3 | 0.85 |
| 7 | ಪಟ್ಟಣ ಪಂಚಾಯತಿ ಔರಾದ (ಬಾ) | : | ಹೌದು | 3.5 | 2 | 1.5 | ಹೌದು | 5.5 | 5.5 | 0 |

ಯೋಜನಾ ನಿರ್ದೇಶಕರು
ಜಿಲ್ಲಾ ನಗರಾಭಿವೃದ್ಧಿ ಕೋಶ

## ಅನುಬಂಧ-3

| ಕ್ರ | ನಗರ ಸ್ಥಳೀಯ ಸಂಸ್ಥೆ ಹೆಸರು | ಒಂದು ತಿಂಗಳಿಗೆ Operational and maintainance cost | ನಿರ್ವಹಣೆಯನ್ನು ಖಾಸಗಿ ಸಂಸ್ಥೆಗಳಿಗೆ ವಹಿಸಲಾಗಿದೆಯೇ (ಹೌದು/ಇಲ್ಲ) | ಷರಾ |
|---|---|---|---|---|
| 1 | ಮಹಾನಗರ ಪಾಲಿಕೆ ಬೀದರ | 0 | ಹೌದು | ವೀರ ಸಹಾಯಿ ಕರ್ಮಚಾರಿ ಸಂಸ್ಥೆ ಮತ್ತು ಮೈತ್ರಾಲಿ ಸೇವಾ ಸಂಸ್ಥೆ |
| 2 | ಬಸವಕಲ್ಯಾಣ ನಗರಸಭೆ | 0 | ಹೌದು | ಸನ್ ಇಂಟರ್ನ್ಯಾಷನಲ್ ಏಜೆನ್ಸಿ |
| 3 | ಭಾಲ್ಕಿ ಪುರಸಭೆ | 0 | ಹೌದು | ಕರ್ನಾಟಕ ಸುಲಭ ಶೌಚಾಲಯ ಬಿಜಾಪುರ |
| 4 | ಹುಮನಾಬಾದ ಪುರಸಭೆ | 0 | ಹೌದು | ಕರ್ನಾಟಕ ಗ್ರಾಮೀಣ ಮಹಿಳಾ ಮತ್ತು ಪುರುಷ ಸೇವಾ ಸಂಸ್ಥೆ |
| 5 | ಚಿಟಗುಪ್ಪಾ ಪುರಸಭೆ | 20000 | ಇಲ್ಲ | ULB ಮೂಲಕ ನಿರ್ವಹಿಸುತ್ತದೆ |
| 6 | ಹಳ್ಳಿಖೇಡ (ಬಿ) ಪುರಭೆ | 0 | ಹೌದು | ಚರಣ್ ಸಿಂಗ್ ಸೇವಾ ಸಂಸ್ಥೆ |
| 7 | ಪಟ್ಟಣ ಪಂಚಯಿತಿ ಔರಾದ (ಬಾ) | 0 | ಹೌದು | ನವಜೀವನ್ ಫೌಂಡೇಶನ್ |

ಯೋಜನಾ ನಿರ್ದೇಶಕರು
ಜಿಲ್ಲಾ ನಗರಾಭಿವೃದ್ಧಿ ಕೋಶ
ಬೀದರ

# ಅನುಬಂಧ-4

| ಕ್ರ. | ನಗರ ಸ್ಥಳೀಯ ಸಂಸ್ಥೆ ಹೆಸರು | ಆರೋಗ್ಯ ಸಹಯೋಗದೊಂದಿಗೆ ಕೈಗೊಂಡಿರುವ ಕ್ರಮಗಳೇನು | ಕಳೆದ ಒಂದು ವರ್ಷದಲ್ಲಿ ದಾಖಲಾಗಿರುವ ಪ್ರಕರಣಗಳ ಸಂಖ್ಯೆ | ಷರಾ |
|---|---|---|---|---|
| 1 | ಮಹಾನಗರ ಪಾಲಿಕೆ ಬೀದರ | ಆರೋಗ್ಯ ಇಲಾಖೆಯ ಸಹಯೋಗದಿಂದ ಲಾರ್ವಾ ಸರ್ವೆ ಕೈಗೊಳ್ಳಲಾಗಿದ್ದು | 26 | ಸದರಿ ಪ್ರಕರಣ ಸಂಖ್ಯೆಗಳು ಆರೋಗ್ಯ ಇಲಾಖೆಯಿಂದ ಪಡೆಯಲಾಗಿದೆ. |
| 2 | ಬಸವಕಲ್ಯಾಣ ನಗರಸಭೆ | | 1 | |
| 3 | ಭಾಲ್ಕಿ ಪುರಸಭೆ | | 0 | |
| 4 | ಹುಮನಾಬಾದ ಪುರಸಭೆ | | 2 | |
| 5 | ಚಿಟಗುಪ್ಪಾ ಪುರಸಭೆ | | 1 | |
| 6 | ಹಳ್ಳಿಖೇಡ (ಬಿ) ಪುರಸಭೆ | | 1 | |
| 7 | ಪಟ್ಟಣ ಪಂಚಾಯಿತಿ ಔರಾದ (ಬಾ) | | 2 | |

ಯೋಜನಾ ನಿರ್ದೇಶಕರು
ಜಿಲ್ಲಾ ನಗರಾಭಿವೃದ್ಧಿ ಕೋಶ
ಬೀದರ